

# ಕಬೀರದಾಸ

ಮೂಲ: ರವೀಂದ್ರನಾಥ ಠಾಕೂರ್    ಕಥೆ: ಮೋಹನಾ ಸೂರ್ಯನಾರಾಯಣ    ಚಿತ್ರ: ಶಂಕರ್


1 ಅದು ಸಂತಶ್ರೇಷ್ಠರಾದ ಸ್ವಾಮಿ ರಾಮಾನಂದರು ಜೀವಿಸಿದ್ದ ಕಾಲ. ಆಗ ಕಬೀರನೆಂಬ ಬಾಲಕನು ಪವಿತ್ರ ಚಿಂತನೆಗಳಲ್ಲೇ ಮುಳುಗಬೇಕೆಂದು ಬಯಸಿದ್ದನು.





2 ದೇವರ ಕೃಪೆಯಿಂದ ಕಬೀರನ ಪ್ರಾರ್ಥನೆಗೆ ಉತ್ತರ ಲಭಿಸಿತು. ಒಂದು ದಿನ ಮುಂಜಾನೆ ಸ್ವಾಮಿ ರಾಮಾನಂದರು ಗಂಗಾನದಿಯ ಪಂಚಗಂಗಾ ಘಟ್ಟದಲ್ಲಿ ಮೆಟ್ಟಿಲಿಳಿದು ಬರುತ್ತಿದ್ದರು. ಯಾರಿಗೂ ಕಾಣಿಸದಂತೆ ಮೆಟ್ಟಿಲಲ್ಲಿ ಮಲಗಿದ್ದ ಕಬೀರನನ್ನು ಅವರು ಅರಿಯದೆ ತುಳಿದುಬಿಟ್ಟರು. ಹಿಂದಕ್ಕೆ ಸರಿದ ಅವರು ರಾಮನಾಮವನ್ನು ಜಪಿಸಿದರು.





3




4 ನೇಕಾರನಾಗಿದ್ದ ಕಬೀರನು ಭಕ್ತಿಯಿಂದ ತುಂಬಿ ತುಳುಕಾಡುವ ಹಲವಾರು  ದೋಹೆ (ದ್ವಿಪದಿ-ಎರಡು ಸಾಲಿನ ಹಾಡುಗಳು)ಗಳನ್ನು ರಚಿಸಿದನು. ಅವನೊಂದಿಗೆ ಭಜನೆಯಲ್ಲಿ ಅವನ ಮನೆಯವರೂ ಸೇರಿಕೊಂಡರು.




5 ಹಿಂದೂ-ಮುಸ್ಲಿಮರ ಸಾಮರಸ್ಯವನ್ನು ಸಾರುವ ಹಲವು ದೋಹೆಗಳನ್ನು ಕಬೀರ ಹಾಡಿದ.
ದೇವರು ಕೇವಲ ಮಸೀದಿಯಲ್ಲಿ ಮಾತ್ರ ಇರುವನೆ? ಬೇರೆ ಸ್ಥಳಗಳು ಇನ್ನಾರಿಗೆ ಸೇರಿದೆ? ಕಲ್ಲನ್ನು ಪೂಜಿಸುವುದಿದ್ದರೆ, ಸಣ್ಣ ಕಲ್ಲನ್ನೇಕೆ ಪೂಜಿಸುವೆ? ದೊಡ್ಡ ಪರ್ವತವನ್ನೇ ಪೂಜಿಸಬಹುದಲ್ಲ? ಸ್ನೇಹಿತರೆ, ನಾವೆಲ್ಲರೂ ಒಂದಾಗಿ, ಸ್ನೇಹದಿಂದ ಬಾಳೋಣ. ಇದೇ ನಮ್ಮ ಧರ್ಮ.
6 ಕೆಲವು ವರ್ಷಗಳ ನಂತರ ಕಬೀರನು ಏಕಾಂತದಲ್ಲಿದ್ದು ಜಪಸಾಧನೆ ಮಾಡಬಯಸಿದನು. ಅದಕ್ಕಾಗಿ ಅವನು ಶ್ರೀರಾಮನನ್ನು ಪ್ರಾರ್ಥಿಸಿದ. ಆದರೆ ಅವನ ಸುತ್ತ ಯಾವಾಗಲೂ ಬಹಳ ದೊಡ್ಡ ಗುಂಪು ನೆರೆದಿರುತ್ತಿತ್ತು.
ಕಬೀರನು ಔಷಧಿ ಕೊಟ್ಟರೆ ಎಲ್ಲ ವ್ಯಾಧಿಗಳೂ ವಾಸಿಯಾಗುತ್ತವೆ.
ಇಂತಹ ಶಕ್ತಿ ಔಷಧಿಯಲ್ಲಿಲ್ಲ ಸ್ವಾಮಿ! ಅವನು ಔಷಧಿ ಕೊಡುವಾಗ ರಾಮನಾಮವನ್ನು ಜಪಿಸುತ್ತಾನೆ. ಶಕ್ತಿಯೆಲ್ಲ ಆ ರಾಮನಾಮದಲ್ಲಿದೆ.
7 ಕಬೀರನ ಪ್ರಸಿದ್ಧಿಯನ್ನು ನೋಡಿದ ಕಪಟಿ ಧಾರ್ಮಿಕ ಮುಖಂಡರು ಚಿಂತೆಗೊಳಗಾದರು. ಅವರೆಲ್ಲ ಒಟ್ಟುಸೇರಿದರು.
ದಿನದಿಂದ ದಿನಕ್ಕೆ ಕಬೀರನ ಉದ್ಧಟತನ ಹೆಚ್ಚಾಗುತ್ತಿದೆ. ಯಾವಾಗಲೂ ಅವನು ಜನಸಂದಣಿಯಲ್ಲೇ ಹಾಡುತ್ತಾನೆ.
ಅವನೊಬ್ಬ ನೇಕಾರನಷ್ಟೇ. ಆದರೆ ಅವನು ಸೂಫೀ ಸಂತನ ಹಾಗೆ ಮಾತನಾಡುತ್ತಾನೆ.
ಇದನ್ನು ಆದಷ್ಟು ಬೇಗನೆ ಕೊನೆಗಾಣಿಸಬೇಕು.
8 ಆ ಮುಖಂಡರೆಲ್ಲ ಕುತಂತ್ರ ಮಾಡಿ, ಒಬ್ಬಾಕೆ ಕೆಟ್ಟ ಹೆಂಗಸನ್ನು ಕಬೀರನ ಅಂಗಡಿಗೆ ಕಳುಹಿಸಿದರು. ಅವಳು ಸೀರೆ ಖರೀದಿಸಲು ಬಂದಿರುವಂತೆ ನಟಿಸಿದಳು.
ಅಪ್ಪಾ, ನನಗೊಂದು ಒಳ್ಳೆಯ ಸೀರೆಯನ್ನು ತೋರಿಸಿ.
ನೋಡಿ, ಕಪ್ಪು ಬಣ್ಣದ ಹೂವಿನ ಕುಸುರಿಗಳಿರುವ ಈ ಸೀರೆ ನಿಮಗೆ ಚೆನ್ನಾಗಿ ಹೊಂದಬಹುದು.


9
ಆ ವಂಚಕಿಯು ಸೀರೆಯನ್ನು ತೆಗೆದುಕೊಳ್ಳುವಾಗ ಇದ್ದಕ್ಕಿದಂತೆ ಕಬೀರನ ಕೈಯನ್ನು ಹಿಡಿದುಕೊಂಡಳು.
ಅಮ್ಮಾ, ನಿನ್ನ ಕೈಯನ್ನು ನಾನು ಹಿಡಿದೆನೆ? ನೀನೇ ನನ್ನ ಕೈಯನ್ನು ಹಿಡಿದುಕೊಂಡೆ.
ಅಯ್ಯೋ, ನನ್ನ ಕೈಯನ್ನು ಬಿಡಿ. ಈ ಅನಾಚಾರವನ್ನು ತಡೆಯುವ ಮಂದಿ ಯಾರೂ ಇಲ್ಲವೇ?
ನೀನೇ ನನ್ನ ಕೈ ಹಿಡಿದು ಈಗ ನನ್ನ ಮೇಲೆ ಆರೋಪ ಹಾಕುತ್ತಿರುವೆಯಾ? ಈ ಪಟ್ಟಣದಲ್ಲಿ ಸ್ವಲ್ಪವೂ ನ್ಯಾಯ ಎಂಬುದಿಲ್ಲವೆ?
10
ಕಬೀರನನ್ನು ದ್ವೇಷಿಸುತ್ತಿದ್ದ ಮುಖಂಡರೆಲ್ಲ ತಮ್ಮ ಯೋಜನೆಯಂತೆ ಅಲ್ಲಿಗೆ ಬಂದರು.
ಏಯ್, ಕಬೀರ! ನೀನು ಭಕ್ತನಂತೆ ನಟಿಸಿ ಈಗ ಇಂತಹ ಅನಾಚಾರ ಮಾಡುತ್ತಿದ್ದೀಯಾ?
ನನ್ನ ಕೈಯನ್ನು ಹಿಡಿದ ಇವನೊಂದಿಗೆ ಮಾತ್ರವೇ ನಾನು ಜೀವಿಸಬಲ್ಲೆ. ಬೇರೆ ಯಾರು ನನ್ನನ್ನು ಮದುವೆಯಾಗುವರು?
ಅಳಬೇಡ ತಾಯಿ! ಇವನಿಗೆ ನಾವು ಎಂತಹ ಶಿಕ್ಷೆ ಕೊಡಬೇಕು? ನೀನೇ ನಿರ್ಧರಿಸು.
11
ಕಬೀರ, ಇನ್ನು ಮುಂದೆ ನೀನು ಈ ಹೆಂಗಸಿನೊಂದಿಗೆ ಜೀವನ ನಡೆಸಬೇಕು. ತಿಳಿಯಿತೆ?
ದೇವಾ! ನನ್ನ ಪ್ರಾರ್ಥನೆಯನ್ನು ಆಲಿಸು. ಇದಕ್ಕೆ ತಕ್ಕ ರೀತಿಯಲ್ಲಿ ನಿನ್ನ ಉತ್ತರವನ್ನು ಕೊಡು.
ಕಬೀರನು ಅವಳ ನಿರ್ಧಾರವನ್ನು ಶ್ರೀರಾಮನ ನಿರ್ಧಾರವೆಂದೇ ಎಣಿಸಿ, ಅವಳೊಂದಿಗೆ ತನ್ನ ಮನೆಗೆ ಹೋದ.
12
ಕಬೀರನ ಮನೆಯನ್ನು ಪ್ರವೇಶಿಸಿದಾಗ ಆ ಹೆಂಗಸಿಗೆ ಹೇಳಲಾಗದಂತಹ ಭಯ ಆವರಿಸಿಕೊಂಡಿತು. ಕೂಡಲೇ ಅವಳು ಕಬೀರನ ಮುಂದೆ ಮಂಡಿಯೂರಿ ...
ಅಯ್ಯೋ... ನನಗೆ ತುಂಬಾ ಕಷ್ಟವಾಗುತ್ತಿದೆ. ಸ್ವಾಮಿ, ಅವರುಗಳ ಮಾತನ್ನು ಕೇಳಿ ನಾನು ನಿಮ್ಮ ಮೇಲೆ ಸುಳ್ಳು ಆರೋಪ ಮಾಡಿದೆ. ಈಗ ನೀವೇ ನನ್ನನ್ನು ರಕ್ಷಿಸಬೇಕು.
ಮಗೂ, ಸಮಾಧಾನ ತಾಳಿಕೋ. ನಿನ್ನ ಹೃದಯವನ್ನು ತೆರೆದು, ರಾಮನ ದಿವ್ಯಪ್ರಭೆ ಅದನ್ನು ತುಂಬುವಂತೆ ಮಾಡು. ನೀನಿಲ್ಲೇ ಇದ್ದುಕೊಂಡು ಶ್ರೀರಾಮನ ಸೇವೆ ಮಾಡು.

**13** ಕಬೀರನು ಬಟ್ಟೆ ನೇಯುವಾಗ ಭಜನೆ ಹಾಡುತ್ತಿದ್ದ. ಆ ಹೆಂಗಸೂ ಹಾಡುತ್ತಿದ್ದಳು. ಕ್ರಮೇಣ ಕಬೀರನ ತತ್ತ್ವಭರಿತವೂ ಭಕ್ತಿಪೂರಿತವೂ ಆದ ಹಾಡುಗಳು ಅವಳ ಹೃದಯವನ್ನು ಪರಿಶುದ್ಧಗೊಳಿಸಿದವು. ಅವಳು ಭಕ್ತೆಯಾಗಿ ಪರಿವರ್ತನೆ ಹೊಂದಿದಳು. ಆದರೆ ಅವಳು ಬಂದ ಮೇಲೆ ಕಬೀರನ ಅಂಗಡಿಗೆ ಗಿರಾಕಿಗಳು ಕಡಿಮೆಯಾದರು.

**14** ಕೆಲವು ವರ್ಷಗಳು ಕಳೆದವು. ಒಂದು ಸಲ ರಾಜನು ತನ್ನ ಆಸ್ಥಾನಕ್ಕೆ ಕಬೀರನನ್ನು ಆಹ್ವಾನಿಸಿದ. ಅವನ ಹಾಡುಗಳು ವಿಶೇಷವಾದವು ಎಂದು ಅವನು ಕೇಳಿದ್ದ. ಕಬೀರನು ತನ್ನೊಂದಿಗೆ ಆ ಹೆಂಗಸನ್ನೂ ಕರೆತಂದ. ಇದರಿಂದ ರಾಜ ಅಸಮಾಧಾನಗೊಂಡ.




**15** ಕಬೀರನು ರಾಜನ ವರ್ತನೆಯಿಂದ ಬೇಸರಪಡಲಿಲ್ಲ. ಆದರೆ ಆ ಹೆಂಗಸು ತುಂಬಾ ದುಃಖಿತಳಾದಳು.




ಕಬೀರನು ಯಾವುದೇ ಬಗೆಯ ಟೀಕೆಯಿಂದಲೂ ವಿಚಲಿತನಾಗಲಿಲ್ಲ. ಜನರಿಗೆ ಕೆಲವೇ ದಿನಗಳಲ್ಲಿ ಅವನ ಮಹಿಮೆ ಅರ್ಥವಾಯಿತು. ಅವರು ಮತ್ತೆ ಭಕ್ತಿ, ಗೌರವಗಳಿಂದ ಅವನ ಬಳಿಗೆ ಬರಲಾರಂಭಿಸಿದರು.

''ಭಗವಂತನ ಸಾಕ್ಷಾತ್ಕಾರ ಪಡೆದ ವ್ಯಕ್ತಿ ಸಂಸಾರದಲ್ಲಿ ಬಂದು ಇದ್ದರೂ ಕಾಮಕಾಂಚನ ಆತನಿಗೆ ಏನನ್ನೂ ಮಾಡಲಾರವು. ಆದರೆ ಪ್ರಥಮದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು..ಅಶ್ವತ್ಥವೃಕ್ಷ ಇನ್ನೂ ಸಸಿಯಾಗಿರುವಾಗ ಆಡು ದನಕರುಗಳು ಅದನ್ನು ತಿಂದು ನಾಶಮಾಡದೆ ಇರಲಿ ಎಂದು ಅದರ ಸುತ್ತಲೂ ಬೇಲಿ ಹಾಕುತ್ತಾರೆ. ಆದರೆ ಬುಡ ದಪ್ಪವಾಯಿತೆಂದರೆ ಬೇಲಿಯ ಆವಶ್ಯಕತೆಯೇನಿರದು. ಆಗ ತೆಗೆದುಕೊಂಡು ಹೋಗಿ ಆನೆಯನ್ನು ಕಟ್ಟಿದರೂ ಅದಕ್ಕೆ ಏನೂ ಆಗದು. ನಿರ್ಜನ ಪ್ರದೇಶದಲ್ಲಿ ಸಾಧನೆ ಮಾಡಿ ಭಗವಂತನ ಪಾದಪದ್ಮಗಳನ್ನು ಭಕ್ತಿಯಿಂದ ಪೂಜಿಸಿ, ಶಕ್ತಿಯನ್ನು ವೃದ್ಧಿ ಮಾಡಿಕೊಂಡು ಮನೆಗೆ ಹೋಗಿ ಸಂಸಾರದಲ್ಲಿ ಇದ್ದರೆ ಕಾಮಕಾಂಚನ ನಿನ್ನನ್ನು ಏನೂ ಮಾಡಲಾರವು.''

— ಶ್ರೀರಾಮಕೃಷ್ಣರು

